## 2015 ಕ.ತೀ.ವ 504

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

### ವೇಣುಗೋಪಾಲ್ ಮತ್ತು ಮತ್ತೊಬ್ಬರು –ವಿರುದ್ಧ– ಅಸಿಸ್ಟೆಂಟ್ ರಿಜಿಸ್ಟ್ರಾರ್, ಸಹಕಾರ ಸಂಘಗಳು, ಚಿಕ್ಕಬಳ್ಳಾಪುರ ಮತ್ತು ಇತರರು*

ಭಾರತ ಸಂವಿಧಾನದ ಅನುಚ್ಛೇದ 226 & 227ರ ಮೇರೆಗೆ ರಿಟ್ ಅರ್ಜಿ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ವ್ಯವಸಾಯ ಸೇವಾ ಸಹಕಾರ ಸಂಘವನ್ನು ನೋಂದಾಯಿಸಿ ಅದರ ಮುಖ್ಯ ಪ್ರವರ್ತಕರಾಗಿ ತಮ್ಮನ್ನು ಪರಿಗಣಿಸದೆ ಹಾಗೂ ತಮಗೆ ಪ್ರಾರಂಭಿಕ ಹಂತದ ಷೇರುದಾರರಾಗುವ ಅವಕಾಶದಿಂದ ವಂಚಿತರನ್ನಾಗಿಸಲಾಗಿದೆಯೆಂದು ಇಲ್ಲಿನ ಅರ್ಜಿದಾರರು ಈ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಅರ್ಜಿದಾರರು ಸಂಘದ ಸದಸ್ಯರಾಗಲು ಉದ್ದೇಶಿಸಿದಲ್ಲಿ, ಅವರು ಖಂಡಿತವಾಗಿ ಅರ್ಜಿ ಸಲ್ಲಿಸಬಹುದಾಗಿತ್ತು ಮತ್ತು ಕಾನೂನಿನ ಅನುಸಾರ ಮತ್ತು ಉಪವಿಧಿಗಳ ಪ್ರಕಾರ ಸದಸ್ಯರಾಗಬಹುದಿತ್ತು. ಅವರು ಅಂಥ ಅವಕಾಶದಿಂದ ವಂಚಿತರಾಗಿದ್ದಾರೆಂಬುದು ಅವರ ವಾದವಲ್ಲ. ಅವರು ಈಗ ಸಂಘದ ನೋಂದಣಿಯನ್ನು ಮತ್ತು ಯುಕ್ತವಾಗಿ ನೋಂದಾಯಿತವಾಗಿರುವ, ಸಂಘದ ಪರವಾಗಿ ನೀಡಲಾದ, ನೋಂದಣಿ ಪ್ರಮಾಣಪತ್ರವನ್ನು ಪ್ರಶ್ನಿಸುವುದರಲ್ಲಿ ಆಸಕ್ತರಾಗಿದ್ದಾರೆ. ಈ ನ್ಯಾಯಾಲಯವು, ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸುವ ಮೂಲಕ ಸಂಘವನ್ನು ನೋಂದಾಯಿಸುವಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರನ ಆದೇಶದ ಸರಿತನವನ್ನು ಪರಿಶೀಲಿಸಲಾಗುವ ರೀತಿಯಲ್ಲಿ, ಅಧಿನಿಯಮದ 6 ಮತ್ತು 7ನೇ ಪ್ರಕರಣಗಳಲ್ಲಿ ಒಳಗೊಂಡಿರುವ ಸದರಿ ಉಪಬಂಧಗಳನ್ನು ಉಲ್ಲಂಘಿಸಲಾಗಿದೆಯೆಂದು ತೋರಿಸಲು ಯಾವುದೇ ಆಧಾರವಿಲ್ಲ. ಇಂಥ ವಿಷಯದಲ್ಲಿ ಚಲಾಯಿಸಬೇಕಾದ ನ್ಯಾಯಿಕ ಪರಿಶೀಲನೆಯ ಅಧಿಕಾರವು ಬಹಳ ಸೀಮಿತವಾಗಿದೆ. ಆದ್ದರಿಂದ ದಿಬ್ಬೂರಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತವನ್ನು ನೋಂದಣಿ ಮಾಡುವಲ್ಲಿ, ಅರ್ಜಿದಾರರ

*ರಿಟ್ ಅರ್ಜಿ ಸಂ. 47479/2014 ಮತ್ತು ಇದರೊಂದಿಗೆ ಇತರೆ, ದಿನಾಂಕ: 15ನೇ ಆಕ್ಟೋಬರ್, 2014.

**ಮೂಲಭೂತ ಹಕ್ಕಾಗಲಿ ಅಥವಾ ಯಾವುವೇ ಶಾಸನಾತ್ಮಕ ಹಕ್ಕುಗಳಾಗಲೀ ಉಲ್ಲಂಘನೆಯಾಗಿಲ್ಲ ಎಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಗಳನ್ನು ವಜಾಗೊಳಿಸಿದೆ (ಪ್ಯಾರಾ: 10)**

ಅಪೀಲುದಾರರ ಪರ : ಶ್ರೀ ಕೆ.ಎನ್. ಸುಬ್ಬಾರೆಡ್ಡಿ–ವಕೀಲರ ಪರವಾಗಿ
ಶ್ರೀ ವಿವೇಕ್ ಎಸ್ ರೆಡ್ಡಿ–ಹಿರಿಯ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

1. ಈ ಎರಡು ರಿಟ್ ಅರ್ಜಿಗಳಲ್ಲಿ, ಸಾಮಾನ್ಯ ಪ್ರಶ್ನೆಗಳನ್ನು ಎತ್ತಲಾಗಿದೆ. ಈ ರಿಟ್ ಅರ್ಜಿಗಳಲ್ಲಿನ ಆಕ್ಷೇಪಣೆಯು, ದಿಬ್ಬೂರಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತವನ್ನು ಒಂದು ಪ್ರಾಥಮಿಕ ಕೃಷಿ ಸಹಕಾರ ಸಂಘವನ್ನಾಗಿ ನೋಂದಾಯಿಸಿ, ಸಹಕಾರ ಸಂಘಗಳ ಅಧಿಕಾರ ವ್ಯಾಪ್ತಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದ್ದಾಗಿದೆ. ಅಸಿಸ್ಟೆಂಟ್ ರಿಜಸ್ಟ್ರಾರ್‌ರವರು ನೀಡಿದ ನೋಂದಣಿ ಪ್ರಮಾಣ ಪತ್ರಕ್ಕೆ, ತತ್ಪರಿಣಾಮವಾದ ಪ್ರಶ್ನೆಯನ್ನು ಸಹ ಮಂಡಿಸಲಾಗಿದೆ. ಪ್ರಶ್ನಿತ ಆದೇಶವನ್ನು ಹಾಗೂ ಪ್ರಮಾಣ ಪತ್ರವನ್ನು ಅನುಬಂಧ–ಎ ಮತ್ತು ಬಿ ಗಳಲ್ಲಿ ಹಾಜರುಪಡಿಸಲಾಗಿದೆ.

2. ಅರ್ಜಿದಾರರು ತಾವು ದಿಬ್ಬೂರಹಳ್ಳಿ ಗ್ರಾಮದ ನಿವಾಸಿಗಳೆಂದು ಹೇಳಿಕೊಂಡಿದ್ದಾರೆ. ಅಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘವು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ, 'ಅಧಿನಿಯಮ') ಉಪಬಂಧಗಳ ಅಡಿಯಲ್ಲಿ ಯುಕ್ತವಾಗಿ ನೋಂದಾಯಿತವಾಗಿದ್ದು, ಅರ್ಜಿದಾರರು ಅದರ ನಿರ್ದೇಶಕರುಗಳಾಗಿರುತ್ತಾರೆ. ಸದರಿ ಸಂಘವನ್ನು ಮುಕ್ತಾಯಗೊಳಿಸಲಾಗಿತ್ತು. 47825ರಿಂದ 828/2014ರವರೆಗಿನ ರಿಟ್ ಅರ್ಜಿಗಳಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 4 ಆದ ನರಸಿಂಹಪ್ಪ ಎಂಬುವವರು ಸಹಕಾರ ಸಂಘದ ನೋಂದಣಿಗಾಗಿ ಷೇರುದಾರರಿಂದ

ನಿಧಿಗಳನ್ನು ಸಂಗ್ರಹಿಸಲು ಅನುಮತಿ ಕೋರಿ ಅಸಿಸ್ಟೆಂಟ್ ರಿಜಿಸ್ಟ್ರಾರರಿಗೆ ಮನವಿ ಸಲ್ಲಿಸುವ ಮೂಲಕ ವ್ಯವಸಾಯ ಸೇವಾ ಸಹಕಾರ ಸಂಘವನ್ನು ಸ್ಥಾಪಿಸುವುದಕ್ಕಾಗಿ ಮುಖ್ಯ ಪ್ರವರ್ತಕರಾಗಿ ಕಾರ್ಯನಿರ್ವಹಿಸುವವರಂತೆ ಕ್ರಮಗಳನ್ನು ಕೈಗೊಂಡಿದ್ದರು ಅವರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗೆ, ಸಂಘದ ಸ್ಥಾಪನೆಯ ಕಾರ್ಯಸಾಧ್ಯತೆಗೆ ಸಂಬಂಧಿಸಿದಂತೆ ತನ್ನ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಯಿತು.

3. ದಿನಾಂಕ 18.02.2014ರಂದು ಶಿಡ್ಲಘಟ್ಟದ ಸಹಕಾರ ಅಭಿವೃದ್ಧಿ ಅಧಿಕಾರಿಯು ವರದಿಯನ್ನು ಸಲ್ಲಿಸಿದರು. ಸದರಿ ವರದಿಯನ್ನು ಪರಿಗಣಿಸಿ, ಷೇರು ಮೊತ್ತವನ್ನು ಪಡೆದುಕೊಳ್ಳಲು, ಕೆಲವು ಷರತ್ತುಗಳ ಮೇಲೆ, ಮುಖ್ಯಪ್ರವರ್ತಕರಿಗೆ ಅನುಮತಿ ನೀಡಲಾಯಿತು. ಅವರು ಷೇರುದಾರರಿಂದ ಷೇರು ಮೊತ್ತವನ್ನು ಪಡೆಯಲು ನೀಡಲಾದ ಕಾಲಾವಧಿಯನ್ನು ಒಂದು ತಿಂಗಳಿಗೆ ವಿಸ್ತರಿಸಲಾಯಿತು. ಷೇರು ಮೊತ್ತವನ್ನು ಪಡೆದುಕೊಂಡ ನಂತರ, ಮುಖ್ಯಪ್ರವರ್ತಕರು ಅರ್ಜಿಯೊಂದನ್ನು ಸಲ್ಲಿಸಿದ್ದು, ಅದನ್ನು ಸಹಕಾರ ಅಭಿವೃದ್ಧಿ ಅಧಿಕಾರಿಯು ಮನವಿಯ ಅನುಮೋದನೆಗೆ ತನ್ನ ಪ್ರಸ್ತಾವನೆಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಪ್ರಸ್ತಾವನೆಯ ಪರಿಶೀಲನೆಯ ಮೇಲೆ, ಸಂಘವು ನೋಂದಾಯಿತವಾಗಬೇಕಾದ ಗುರಿ ಮತ್ತು ಉದ್ದೇಶಗಳನ್ನು ಹಾಗೂ 238 ವ್ಯಕ್ತಿಗಳಿಂದ ಷೇರು ಮೊತ್ತವನ್ನು ಸಂಗ್ರಹಿಸಿದ್ದು ಅದು ಒಟ್ಟು 2,20,000/– ರೂ.ಗಳಾಗಿದೆಯೆಂಬ ಸಂಗತಿಯನ್ನು ಗಮನಿಸಿ, ಅಸಿಸ್ಟೆಂಟ್ ರಿಜಿಸ್ಟ್ರಾರರು, ಸಂಘದ ನೋಂದಣಿಯು, ಸ್ಥಳೀಯ ರೈತರ ಪ್ರಯೋಜನಕ್ಕಾಗಿಯೇ ಇರುವುದಾಗಿದ್ದು, ಆ ಮೂಲಕ ಅವರಿಗೆ ರಾಜ್ಯ ಸರ್ಕಾರದಿಂದ ಒದಗಿಸಲಾದ ಸೌಲಭ್ಯಗಳನ್ನು ತಲುಪಿಸಲಾಗುತ್ತದೆ ಎಂಬುದನ್ನು ಮನಗಂಡಿದ್ದು, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಹಕಾರ ಸಂಘದ ನೋಂದಣಿಯನ್ನು ನಿರ್ದೇಶಿಸುವ ಆದೇಶವನ್ನು ಹೊರಡಿಸಿದರು. ಈ ಆದೇಶವನ್ನೇ ಇಲ್ಲಿ ಅರ್ಜಿದಾರರು ಪ್ರಶ್ನಿಸಿದ್ದಾರೆ.

4. ಅರ್ಜಿದಾರರ ಮುಖ್ಯ ಅಸಮಾಧಾನವು, 238 ಷೇರುದಾರರಿಂದ ಷೇರು ಮೊತ್ತವನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿ, ಮುಖ್ಯಪ್ರವರ್ತಕರು ಸ್ಥಳೀಯ ವ್ಯಕ್ತಿಗಳು/

ನಿವಾಸಿಗಳನ್ನು ಷೇರುದಾರರಾಗಿ ಸಹಾಯ ಪಡೆಯುವುದಕ್ಕೆ ಮುಂದೆ ಬರಲು, ಅಧಿಸೂಚಿಸಿರುವುದಿಲ್ಲ ಮತ್ತು ಆದ್ದರಿಂದ, ಸಂಘದ ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಉದ್ದೇಶಿಸಿದ ಅರ್ಜಿದಾರರು, ಷೇರು ಮೊತ್ತಕ್ಕಾಗಿ ಹಣ ನೀಡಿರುವ ಇತರ ಷೇರುದಾರರೊಂದಿಗೆ ಸೇರುವ ತಮ್ಮ ಹಕ್ಕಿನಿಂದ ವಂಚಿತರಾಗಿರುತ್ತಾರೆ ಎಂಬುದಾಗಿದೆ.

5. ಸಹಕಾರ ಸಂಘವನ್ನು ರಚಿಸಲು, ಸಂವಿಧಾನಕ್ಕೆ 97ನೇ ತಿದ್ದುಪಡಿಯ ನಂತರ, ಅನುಚ್ಛೇದ 19(1)(ಸಿ) ಅಡಿಯಲ್ಲಿ ಪ್ರದತ್ತವಾದ ಹಕ್ಕು, ಮುಖ್ಯಪ್ರವರ್ತಕರು ಷೇರು ನಿಧಿಯನ್ನು ಸಂಗ್ರಹಿಸುವ ಪ್ರಾರಂಭಿಕ ಹಂತದಲ್ಲಿ ಷೇರುದಾರನಾಗುವ ಮೂಲಕ ಸಹಕಾರ ಸಂಘದ ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಧಿಕಾರವನ್ನು ಒಳಗೊಳ್ಳುತ್ತದೆಯೆಂದು ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ವಕೀಲ ಶ್ರೀ ವಿವೇಕ್ ರೆಡ್ಡಿ ವಾದಿಸಿದ್ದಾರೆ. ಉದ್ದೇಶಿತ ಹೊಸ ಸಂಘದ ರಚನೆಯನ್ನು ಸಾರ್ವಜನಿಕರ ಗಮನಕ್ಕೆ ತರದಿರುವಲ್ಲಿ ಮತ್ತು ಉದ್ದೇಶಿತ ಅರ್ಜಿದಾರರಿಂದ ಪ್ರಾರಂಭಿಕ ಷೇರು ನಿಧಿಯನ್ನು ಸಂಗ್ರಹಿಸಲು ಮುಂದಾಗಿರುವಲ್ಲಿ ಮುಖ್ಯಪ್ರವರ್ತಕರ ಕಡೆಯಿಂದ ಆದ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ವಾಸ್ತವವಾಗಿ ಅಳಲನ್ನು ತೋಡಿಕೊಳ್ಳಲಾಯಿತೆಂದು ವಾದಿಸಲು, ಅನುಕ್ರಮವಾಗಿ ಅನುಬಂಧ–ಡಿ ಮತ್ತು ಎಫ್–1 ದಿನಾಂಕ 07.07.2014 ಮತ್ತು 11.07.2014ರಲ್ಲಿರುವಂತೆ, ಶಿಡ್ಲಘಟ್ಟದ ದಿಬ್ಬೂರಹಳ್ಳಿ ಗ್ರಾಮಪಂಚಾಯತಿ ಅಧ್ಯಕ್ಷರಿಗೆ ಹಾಗೂ ಚಿಕ್ಕಬಳ್ಳಾಪುರ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಿಗೆ ನೀಡಲಾದ ಮನವಿಗಳ ಬಗ್ಗೆ ಅವರು ನ್ಯಾಯಾಲಯದ ಗಮನವನ್ನು ಸೆಳೆದಿದ್ದಾರೆ. ಆದ್ದರಿಂದ, ಅರ್ಜಿದಾರರು ಷೇರುದಾರರಾಗುವ ಮೂಲಕ ಷೇರು ಮೊತ್ತವನ್ನು ಹೆಚ್ಚಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಮಾನಾವಕಾಶದಿಂದ ಅವರು ವಂಚಿತರಾಗಿರುವಷ್ಟರ ಮಟ್ಟಿಗೆ ಸಂವಿಧಾನದ ಅನುಚ್ಛೇದ 14ರ ಉಲ್ಲಂಘನೆಯಾಗಿದೆಯೆಂದು ವಾದಿಸಿದ್ದಾರೆ.

6. ಸಂವಿಧಾನಕ್ಕೆ 97ನೇ ತಿದ್ದುಪಡಿಯ ಮೂಲಕ ಮಾಡಲಾದ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು, ಈ ವಾದಗಳನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.

ಅನುಚ್ಛೇದ 19(1)(ಸಿ)ಯು ಸಂಸ್ಥೆಗಳನ್ನು ಅಥವಾ ಒಕ್ಕೂಟಗಳನ್ನು ಅಥವಾ ಸಹಕಾರ ಸಂಘಗಳನ್ನು ರಚಿಸುವ ಮೂಲಭೂತ ಹಕ್ಕನ್ನು ಎಲ್ಲಾ ನಾಗರಿಕರಿಗೆ ಪ್ರದತ್ತಗೊಳಿಸುತ್ತದೆ. ಸಂವಿಧಾನಕ್ಕೆ 97ನೇ ತಿದ್ದುಪಡಿಯಾಗಿರುವ ಕಾರಣದಿಂದ ಸಹಕಾರ ಸಂಘ ರಚಿಸುವುದನ್ನು ಮೂಲಭೂತ ಹಕ್ಕುಗಳಲ್ಲಿ ಒಂದನ್ನಾಗಿ ಸೇರ್ಪಡೆ ಮಾಡಲಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಅದೇರೀತಿ, 97ನೇ ತಿದ್ದುಪಡಿಯ ಮೂಲಕ, ಭಾಗ–IXಬಿ ಯನ್ನು ಸಹಕಾರ ಸಂಘಗಳ ಸೇರ್ಪಡೆಗಾಗಿ ಸದಸ್ಯರ ಸಂಖ್ಯೆ ಮತ್ತು ಪದಾವಧಿ, ಸಂಘದ ಸದಸ್ಯರಿಗೆ ಚುನಾವಣೆ, ಸಂಘದ ರದ್ದತಿ ಮತ್ತು ಅಮಾನತು, ಇತ್ಯಾದಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ವಿನಿಯಮನಗೊಳಿಸಿ ಹಾಗೂ ಉಪಬಂಧಿಸಿ, ಸಂವಿಧಾನದಲ್ಲಿ ಸೇರ್ಪಡೆ ಮಾಡಲಾಗಿದೆ. ಸಂವಿಧಾನದ ಅನುಚ್ಛೇದ 243–ಝೆಡ್ಐ ಸಹಕಾರ ಸಂಘಗಳ ಸೇರ್ಪಡೆಯನ್ನು ಉಪಬಂಧಿಸುತ್ತದೆ. ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ :

> “ಈ ಭಾಗದ ಉಪಬಂಧಗಳಿಗೊಳಪಟ್ಟು, ರಾಜ್ಯ ವಿಧಾನ ಮಂಡಲವು, ಕಾನೂನಿನ ಮೂಲಕ ಸ್ವಯಂ ಸೇವಾ ಸಂಘದ ರಚನೆ, ಪ್ರಜಾಸತ್ತಾತ್ಮಕ ಸದಸ್ಯ–ನಿಯಂತ್ರಣ, ಸದಸ್ಯ–ಆರ್ಥಿಕ ಸಹಭಾಗಿತ್ವ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳ ಸೇರ್ಪಡೆ ವಿನಿಯಮನ ಹಾಗೂ ಸಮಾಪನಕ್ಕೆ ಸಂಬಂಧಿಸಿದಂತೆ ಉಪಬಂಧಗಳನ್ನು ಕಲ್ಪಿಸುತ್ತದೆ.”

7. ಮಾನ್ಯ ಹಿರಿಯ ವಕೀಲರ ವಾದವು, ಸಂವಿಧಾನದ ಅನುಚ್ಛೇದ 19(1)(ಸಿ) ಮತ್ತು ಅನುಚ್ಛೇದ 243–ಝೆಡ್ಐ ಅನ್ನು ಒಟ್ಟಿಗೆ ಓದುವುದರಿಂದ, ಸಹಕಾರ ಸಂಘವನ್ನು ರಚಿಸಲು ಇರುವ ಮೂಲಭೂತ ಹಕ್ಕು ಒಬ್ಬ ವ್ಯಕ್ತಿಗೆ, ಮತ್ತೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹದಿಂದ ಪ್ರಾರಂಭಿಸಲಾದ ಸಂಘದ ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಧಿಕಾರವನ್ನು ಒಳಗೊಳ್ಳುತ್ತದೆಂದು ಸ್ಪಷ್ಟಪಡಿಸುತ್ತದೆ ಎನ್ನುವುದಾಗಿದೆ. ಇವರು, ಈ ಸಂಬಂಧ ಅನುಚ್ಛೇದ 243–ಝೆಡ್ಐ ನಲ್ಲಿ

ಬಳಸಲಾಗಿರುವ ಪದಾವಳಿಗಳಿಗೆ ಒತ್ತು ನೀಡಿರುತ್ತಾರೆ ಮತ್ತು ಅದರಲ್ಲಿ ಸಹಕಾರ ಸಂಘಗಳ ಸೇರ್ಪಡೆಯ ಪ್ರಕ್ರಿಯೆಗಾಗಿನ ಸ್ವಯಂಪೂರ್ವಕ ರಚನೆ, ಪ್ರಜಾಸತ್ತಾತ್ಮಕ ಸದಸ್ಯ ನಿಯಂತ್ರಣ, ಸದಸ್ಯ–ಆರ್ಥಿಕ ಸಹಭಾಗಿತ್ವ ಹಾಗೂ ಸ್ವಾಯತ್ತ ಕಾರ್ಯಾಚರಣೆ ತತ್ವಗಳನ್ನು ಉಲ್ಲೇಖಿಸಲಾಗಿದೆ.

8. ಪ್ರದತ್ತವಾದ ಮೂಲಭೂತ ಹಕ್ಕು ಸಹಕಾರ ಸಂಘದ ರಚನೆಗೆ ಸಂಬಂಧಿಸಿದ್ದಾಗಿದೆಯೆಂಬ ಸರಳ ಕಾರಣಕ್ಕೆ ಈ ವಾದವನ್ನು ಅಂಗೀಕರಿಸಲಾಗದು. ಅನುಚ್ಛೇದ 19(1)(ಸಿ) ಅಡಿಯಲ್ಲಿನ ಉಪಬಂಧವು, ಎಲ್ಲ ನಾಗರಿಕರು ಸಹಕಾರ ಸಂಘವನ್ನು ರಚಿಸುವ ಅಧಿಕಾರ ಹೊಂದಿರತಕ್ಕದ್ದು ಎಂಬುದನ್ನು ಬಹಳ ಸ್ಪಷ್ಟವಾಗಿ ತಿಳಿಸುತ್ತದೆ. ಇದು ಈ ನ್ಯಾಯಾಲಯದ ಮುಂದೆ ಆ ಸಂಬಂಧವಾಗಿ ಪ್ರಶ್ನೆಯನ್ನು ಮಂಡಿಸಲು ಕೋರಲಾಗುವ ರೀತಿಯಲ್ಲಿ ಅರ್ಜಿದಾರರು ಸಹಕಾರ ಸಂಘವನ್ನು ರಚಿಸಲು ಉದ್ದೇಶಿಸಿದ್ದು, ಆದರೆ ರಾಜ್ಯದ ಯಾವುದೇ ಪ್ರಾಧಿಕಾರ ಅಥವಾ ಮಾಧ್ಯಮವು ಅಂಥ ಅಧಿಕಾರವನ್ನು ಚಲಾಯಿಸುವುದರಿಂದ ತಡೆಯಲಾದ ಪ್ರಕರಣವಾಗಿಲ್ಲ. ಮೂಲಭೂತ ಹಕ್ಕಿನ ಚಲಾವಣೆಯನ್ನು ತಡೆದಲ್ಲಿ ಅಥವಾ ಕಾನೂನುಬಾಹಿರವಾಗಿ ನಿರ್ಬಂಧಿಸಿದಲ್ಲಿ, ಆಗ ನ್ಯಾಯಾಲಯವು, ನಾಗರಿಕನ ಮೂಲಭೂತ ಹಕ್ಕನ್ನು ರಕ್ಷಿಸಲಾಗಿದೆ ಮತ್ತು ಅದನ್ನು ಜಾರಿಗೊಳಿಸಲಾಗಿದೆಯೆಂದು ದೃಢಪಡಿಸುವಲ್ಲಿ ನಿಶ್ಚಿತವಾಗಿ ಅವನ ನೆರವಿಗೆ ಬರುತ್ತದೆ. ಆದರೆ, ಅರ್ಜಿದಾರರು ಯಾವುದೇ ಸಂಘವನ್ನು ರಚಿಸಲು ಯಾವುವೇ ಕ್ರಮಗಳನ್ನು ಕೈಗೊಂಡಿಲ್ಲದಿರುವ ಪ್ರಕರಣ ಇದಾಗಿದೆ. ಅವರು ಹಿಂದೆ ಇದ್ದ ಮತ್ತು ಈಗ ಸಮಾಪನಗೊಂಡಿರುವ ಸಂಘದ ನಿರ್ದೇಶಕರಾಗಿದ್ದರು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅವರು ಸ್ಥಳೀಯ ರೈತರ ಅಗತ್ಯತೆಗಳಿಗೆ ನೆರವನ್ನು ಒದಗಿಸಲು ಮತ್ತೊಂದು ಸಂಘವನ್ನು ರಚಿಸುವುದಕ್ಕೆ ಯಾವುವೇ ಕ್ರಮಗಳನ್ನು ಕೈಗೊಂಡಿಲ್ಲ. ರಿಟ್ ಅರ್ಜಿ ಸಂಖ್ಯೆ 47825–828/2014ರಲ್ಲಿ 4ನೇ ಪ್ರತ್ಯರ್ಜಿದಾರರಾದ ಶ್ರೀ ನರಸಿಂಹಪ್ಪನವರು ಮುಖ್ಯಪ್ರವರ್ತಕರಾಗಿ, ಪ್ರಾಧಿಕಾರಕ್ಕೆ ಮನವಿ ಮಾಡಿದ್ದು, ಸಹಕಾರ ಸಂಘದ ರಚನೆಗಾಗಿ ಇರುವ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮತಿ ಕೋರಿದವರಾಗಿದ್ದಾರೆ. ಇವರು ಷೇರು ಮೊತ್ತವನ್ನು ಸಂಗ್ರಹಿಸಲು ಅನುಮತಿ ಪಡೆದವರಾಗಿದ್ದಾರೆ ಮತ್ತು

238 ವ್ಯಕ್ತಿಗಳಷ್ಟು ದೊಡ್ಡ ಸಂಖ್ಯೆಯ ಜನರು ಪ್ರಾರಂಭಿಕ ಷೇರುದಾರರಾಗುವ ಮೂಲಕ ಷೇರು ಮೊತ್ತವನ್ನು ನೀಡಿದ್ದಾರೆ.

9. ಮುಖ್ಯಪ್ರವರ್ತಕರು ಅರ್ಜಿದಾರರನ್ನು ಪ್ರಾರಂಭಿಕ ಷೇರುದಾರರಾಗಲು ಅಧಿಸೂಚಿಸಿರದಿದ್ದಲ್ಲಿ, ಅದು ಅವರ ಮೂಲಭೂತ ಹಕ್ಕಿನ ಉಲ್ಲಂಘನೆಗೆ ಕಾರಣವಾಗುವುದಿಲ್ಲ. ಅವರು ಬೇರೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ರಚಿಸುವುದಾಗಿ ಕೋರುವ ಸಂಘದಲ್ಲಿ ಪ್ರಾರಂಭಿಕ ಷೇರುದಾರರಾಗುವಂಥ ಮೂಲಭೂತ ಹಕ್ಕನ್ನು ಹೊಂದಿರುವುದಿಲ್ಲ.

10. ಅರ್ಜಿದಾರರು ಸಂಘದ ಸದಸ್ಯರಾಗಲು ಉದ್ದೇಶಿಸಿದಲ್ಲಿ, ಅವರು ಖಂಡಿತವಾಗಿ ಅರ್ಜಿ ಸಲ್ಲಿಸಬಹುದಾಗಿತ್ತು ಮತ್ತು ಕಾನೂನಿನ ಅನುಸಾರ ಮತ್ತು ಉಪವಿಧಿಗಳ ಪ್ರಕಾರ ಸದಸ್ಯರಾಗಬಹುದಿತ್ತು. ಅವರು ಅಂಥ ಅವಕಾಶದಿಂದ ವಂಚಿತರಾಗಿದ್ದಾರೆಂಬುದು ಅವರ ವಾದವಲ್ಲ. ಅವರು ಈಗ ಸಂಘದ ನೋಂದಣಿಯನ್ನು ಮತ್ತು ಯುಕ್ತವಾಗಿ ನೋಂದಾಯಿತವಾಗಿರುವ, ಸಂಘದ ಪರವಾಗಿ ನೀಡಲಾದ, ನೋಂದಣಿ ಪ್ರಮಾಣಪತ್ರವನ್ನು ಪ್ರಶ್ನಿಸುವುದರಲ್ಲಿ ಆಸಕ್ತರಾಗಿದ್ದಾರೆ. ಪ್ರಶ್ನೆಯು, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಉಪಬಂಧಿಸಲಾದಂಥ ಆಧಾರಗಳ ಮೇಲೆ, ಯಾವುವಾದರೂ ಇದ್ದಲ್ಲಿ, ಇರಬಹುದಾಗಿದೆ. ಅಧಿನಿಯಮದ 6 ಮತ್ತು 7ನೇ ಪ್ರಕರಣಗಳು ಅನುಕ್ರಮವಾಗಿ ಸಹಕಾರ ಸಂಘದ ನೋಂದಣಿಗಾಗಿ ಅರ್ಜಿ ಮತ್ತು ನೋಂದಣಿ ಹಾಗೂ ಅದರ ಪ್ರಕ್ರಿಯೆಯೊಂದಿಗೆ ವ್ಯವಹರಿಸುತ್ತವೆ. ಈ ನ್ಯಾಯಾಲಯವು, ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸುವ ಮೂಲಕ ಸಂಘವನ್ನು ನೋಂದಾಯಿಸುವಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರನ ಆದೇಶದ ಸರಿತನವನ್ನು ಪರಿಶೀಲಿಸಲಾಗುವ ರೀತಿಯಲ್ಲಿ, ಅಧಿನಿಯಮದ 6 ಮತ್ತು 7ನೇ ಪ್ರಕರಣಗಳಲ್ಲಿ ಒಳಗೊಂಡಿರುವ ಸದರಿ ಉಪಬಂಧಗಳನ್ನು ಉಲ್ಲಂಘಿಸಲಾಗಿದೆಯೆಂದು ತೋರಿಸಲು ಯಾವುದೇ ಆಧಾರವಿಲ್ಲ. ಇಂಥ ವಿಷಯದಲ್ಲಿ ಚಲಾಯಿಸಬೇಕಾದ ನ್ಯಾಯಿಕ ಪರಿಶೀಲನೆಯ ಅಧಿಕಾರವು ಬಹಳ ಸೀಮಿತವಾಗಿದೆ. ಆದ್ದರಿಂದ ದಿಬ್ಬೂರಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತವನ್ನು ನೋಂದಣಿ ಮಾಡುವಲ್ಲಿ,

ಅರ್ಜಿದಾರರ ಮೂಲಭೂತ ಹಕ್ಕಾಗಲಿ ಅಥವಾ ಯಾವುವೇ ಶಾಸನಾತ್ಮಕ ಹಕ್ಕುಗಳಾಗಲೀ ಉಲ್ಲಂಘನೆಯಾಗಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.

ಆದುದರಿಂದ, ಅರ್ಹತೆ ಇಲ್ಲದಿರುವ ರಿಟ್ ಅರ್ಜಿಗಳನ್ನು ವಜಾಗೊಳಿಸಲಾಗಿದೆ.